*ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರವರ ಅಧ್ಯಕ್ಷತೆಯಲ್ಲಿ ದಿನಾಂಕ: 03.10.2018 ರಂದು ಸಂಜೆ 4.00 ಗಂಟೆಗೆ ನಡೆದ ಯೋಜನಾವಾರು ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.*

*****

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು 2018-19 ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಗೆ ಅಳವಡಿಸಲಾದ ಯೋಜನಾವಾರು ಪ್ರಗತಿ ಪರಿಶೀಲನೆ ನಡೆಸಿ ಪ್ರಸ್ತುತ ಸನ್ನಿವೇಶಕ್ಕೆ ಅನಗತ್ಯವೆನಿಸುವ ಯೋಜನೆಗಳನ್ನು ಮುಕ್ತಾಯಗೊಳಿಸಲು ಹಾಗೂ ಒಂದೇ ಉದ್ದೇಶ ಹಾಗೂ ಗುರಿ ಹೊಂದಿರುವ ಸಣ್ಣ ಸಣ್ಣ ಯೋಜನೆಗಳನ್ನು ವಿಲೀನಗೊಳಿಸುವ ಮೂಲಕ ಯೋಜನೆಗಳ ಸಂಖ್ಯೆಯನ್ನು ಕಡಿತಗೊಳಿಸಲು ಹಾಗೂ ಸಮರ್ಪಕ ರೀತಿಯಲ್ಲಿ ಉಸ್ತುವಾರಿ ನಡೆಸುವ ಮೂಲಕ ಇಲಾಖೆಯ ಅಭಿವೃದ್ಧಿಗೆ ಶ್ರಮಿಸಲು ಕರೆ ನೀಡಿದರು. ಸಭೆಯಲ್ಲಿ ಕೈಗೊಂಡ ನಿರ್ಣಯಗಳು ಈ ಕೆಳಕಂಡಂತಿದೆ.

1) ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನ ಸಂಖ್ಯೆ ಅಧಿಕವಿರುವ ಜನ ವಸತಿಗಳನ್ನು ಗುರುತಿಸಿ ಯೋಜನೆಯ ಅನುಷ್ಠಾನಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ ಅನುದಾನ ಪಡೆಯುವ ಮೂಲಕ SCP-TSP ಯೋಜನೆಗಳಡಿ ಇನ್ನು ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ವಹಿಸುವುದು.

(ಕ್ರಮ: ಆಯುಕ್ತರು, ಗ್ರಾ.ನೀ.ಸ)

2) ಅಂತೆಯೇ ಗ್ರಾಮ ವಿಕಾಸ ಹಾಗೂ ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಗಳಡಿ ಹಾಲಿ ಅನುಷ್ಠಾನಿಸಲಾಗುತ್ತಿರುವ SCP-TSP ಯೋಜನೆಗಳಲ್ಲದೇ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಶೇ.40 ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮಗಳನ್ನು ಗುರುತಿಸಿ ಸದರಿ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಶೇ.100 ರಷ್ಟು ಅನುದಾನವನ್ನು ಹೆಚ್ಚುವರಿಯಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಪಡೆಯಲು ಪ್ರಸ್ತಾವನೆ ಸಲ್ಲಿಸುವುದು.

(ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ)

3) ಸುವರ್ಣ ಗ್ರಾಮೋದಯ ಯೋಜನೆಯಡಿ ಇನ್ನು ಬಾಕಿ ಇರುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸುವುದು ಹಾಗೂ ಉಳಿತಾಯವಾದ ಅನುದಾನಕ್ಕೆ ಹೆಚ್ಚುವರಿ ಕ್ರಿಯಾ ಯೋಜನೆ ಮಾಡುವ ಬಗ್ಗೆ ಕಡತ ಮಂಡಿಸುವುದು.

(ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ)

4) ಗ್ರಾಮ ವಿಕಾಸ / ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ 2 ಮತ್ತು 3ನೇ ಕಂತಿನ ಅನುದಾನವನ್ನು ತುರ್ತಾಗಿ ಬಿಡುಗಡೆಗೊಳಿಸಿ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ವಹಿಸುವುದು.

(ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ)

5) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಅನುಮೋದಿತ ಕಾಮಗಾರಿಗಳು ಇಲ್ಲದಿರುವುದರಿಂದ ಲಭ್ಯವಿರುವ ಅನುದಾನವನ್ನು ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಗೆ ಮರು ಹಂಚಿಕೆ ಮಾಡಿಕೊಳ್ಳಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವುದು.

(ಕ್ರಮ: ಆಂತರಿಕ ಆರ್ಥಿಕ ಸಲಹೆಗಾರರು,ನಿರ್ದೇಶಕರು, ಗ್ರಾಮ ವಿಕಾಸ, ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ)

6) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-ರಸ್ತೆ ನಿರ್ವಹಣೆ ಯೋಜನೆಯಡಿ ಸಾಧಿಸಲಾದ ಪ್ರಗತಿ ಗಣನಿಯವಾಗಿ ಕಡಿಮೆ ಇದ್ದು ಮುಂದಿನ ತಿಂಗಳಿನೊಳಗೆ ನಿಗದಿತ ಗುರಿಗನುಗುಣವಾಗಿ ಪ್ರಗತಿ ಸಾಧಿಸಲು ಕ್ರಮ ವಹಿಸುವುದು.

7) Rurban ಮಿಷನ್ ಯೋಜನೆಯಡಿ ಪ್ರಗತಿ ಹಾಗೂ ಯೋಜನೆಯ ಸ್ಥಿತಿ ಗತಿ ಕುರಿತು ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಂ ರವರು ಪ್ರತ್ಯೇಕವಾಗಿ ಮಾನ್ಯ ಸಚಿವರಿಗೆ ಮನವರಿಸಲು ಕ್ರಮ.

(ಕ್ರಮ: ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಂ)

8) ತಾಲ್ಲೂಕು ಪಂಚಾಯಿತಿಗಳಿಗೆ ಅನುದಾನ (ಅನಿರ್ಬಂಧಿತ) (2515-00-197-1-07) ಯೋಜನೆ ಮತ್ತು ರಸ್ತೆಗಳ ಡಾಂಬರಿಕರಣ ಯೋಜನೆಯನ್ನು (3054-80-197-1-01) ವಿಲೀನಗೊಳಿಸಲು ಯೋಜನಾ ಇಲಾಖೆ ಹಾಗೂ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವುದು.

(ಕ್ರಮ: ಆಂತರಿಕ ಆರ್ಥಿಕ ಸಲಹೆಗಾರರು, ನಿರ್ದೇಶಕರು, ಗ್ರಾಮ ವಿಕಾಸ,ನಿರ್ದೇಶಕರು, ಪಂಚಾಯತ್ ರಾಜ್ –II ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ)

9) ಈ ಹಿಂದೆ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಹಾಲಿ ರಾಜ್ಯದ ಯೋಜನೆಯಾಗಿರುವ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಿ ಕಿಂಡಿ ಅಣೆಕಟ್ಟೆಗಳನ್ನು ಮಾತ್ರ ನಿರ್ಮಿಸಲು (ಮುಂದುವರಿದ ಕಾಮಗಾರಿಗಳನ್ನು ಹೊರತುಪಡಿಸಿ) ಕ್ರಮ ವಹಿಸುವುದು.

10) ಸದರಿ ಯೋಜನೆಯಡಿ ರಾಜ್ಯ ಮಟ್ಟದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವನ್ನು ಯೋಜನೆಯ ಸಹಿತ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡುವುದು.

(ಕ್ರಮ: ಆಯುಕ್ತರು, ಎಂ.ಜಿ.ಎನ್.ಆರ್.ಜಿ.ಎ, ಉಪಕಾರ್ಯದರ್ಶಿ-ಆಡಳಿತ, ನಿರ್ದೇಶಕರು, ಗ್ರಾಮೂಸೌ – II)

11) ಪ್ರಸ್ತುತ ಸನ್ನಿವೇಶದಲ್ಲಿ ರಾಜ್ಯದಲ್ಲಿ ಜೈವಾನಿಲ ಸ್ಥಾವರಗಳಿಗೆ ಬೇಡಿಕೆ ಇಲ್ಲದಿರುವುದರಿಂದ ರಾಷ್ಟ್ರೀಯ ಜೈವಾನಿಲ ಯೋಜನೆ, ಮತ್ತು ಸೌರಬೆಳಕು ಯೋಜನೆ (ಗ್ರಾಮ ಪಂಚಾಯಿತಿಗಳಲ್ಲಿ ಸೌರ ದೀಪಗಳ ಅಳವಡಿಕೆ) ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಲು ಕ್ರಮವಹಿಸುವುದು.

(ಕ್ರಮ: ಆಂತರಿಕ ಆರ್ಥಿಕ ಸಲಹೆಗಾರರು, ನಿರ್ದೇಶಕರು, ಗ್ರಾಮೂಸೌ – II)

12) ಜೈವಾನಿಲ ಅಭಿವೃದ್ಧಿ ಮಂಡಳಿ (2501-04-105-0-03) ಹಾಗೂ IREP Project Implementation IREP Center (MGIRED) (2501-04-105-0-02-059) ಯೋಜನೆಗಳನ್ನು ವಿಲೀನಗೊಳಿಸುವುದು.

(ಕ್ರಮ:ನಿರ್ದೇಶಕರು, ಗ್ರಾಮೂಸೌ – II)

13) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ಹೆಚ್ಚುವರಿ ಕಟ್ಟಡದ ಅವಶ್ಯಕತೆಯಿದ್ದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಅಗತ್ಯ ಅನುದಾನ ಮಂಜೂರು ಮಾಡುವ ಕುರಿತು ಕೂಡಲೇ ಕಡತ ಮಂಡಿಸುವುದು.

(ಕ್ರಮ:ನಿರ್ದೇಶಕರು, ಗ್ರಾಮೂಸೌ – II ಹಾಗೂ ನಿರ್ದೇಶಕರು, ಪಂಚಾಯತ್ ರಾಜ್– II )

14) ರಾಜ್ಯ ವಲಯ ಯೋಜನೆಯಾದ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆ (2215-01-102-9-09) ಯೋಜನೆಯಡಿ ನಿಗಧಿಪಡಿಸಲಾದ ಅನುದಾನವನ್ನು ಜಿಲ್ಲಾ ವಲಯ ಯೋಜನೆಯಾದ ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ (2515-00-196-1-22). ಯೋಜನೆಯೊಂದಿಗೆ ವಿಲೀನಗೊಳಿಸಲು ಕ್ರಮವಹಿಸುವುದು.

(ಕ್ರಮ: ಆಂತರಿಕ ಆರ್ಥಿಕ ಸಲಹೆಗಾರರು, ನಿರ್ದೇಶಕರು, ಪಂಚಾಯತ್ ರಾಜ್ – I ಮತ್ತು II)

15) ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲಾಗುತ್ತಿರುವ ಅಭಿವೃದ್ಧಿ ಅನುದಾನವನ್ನು ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸುವುದು.

(ಕ್ರಮ:ನಿರ್ದೇಶಕರು, ಪಂಚಾಯತ್ ರಾಜ್ – II)

16) ಜಿಲ್ಲಾ ಪಂಚಾಯಿತಿಗಳ ಅಭಿವೃದ್ಧಿ ಅನುದಾನ ಸಮಾನವಾಗಿ ಹಂಚಿಕೆ ಮಾಡಲಾಗುತ್ತಿದೆ. ಅದರ ಬದಲಿಗೆ ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣವನ್ನು ಪರಿಗಣಿಸಿ ಹಂಚಿಕೆ ಮಾಡಲು ಸೂತ್ರ ತಯಾರಿಸಲು ಕ್ರಮ ವಹಿಸುವುದು.

(ಕ್ರಮ:ನಿರ್ದೇಶಕರು, ಪಂಚಾಯತ್ ರಾಜ್–II)

17) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಒದಗಿಸಲಾಗುತ್ತಿರುವ 14ನೇ ಹಣಕಾಸು ಆಯೋಗ ಅನುದಾನದಡಿ ಕೈಗೊಳ್ಳಲಾಗುವ ಕಾಮಗಾರಿಗಳ ಉಸ್ತುವಾರಿ ನಡೆಸಿ ಪ್ರಗತಿ ವರದಿಗಳನ್ನು ಪಡೆಯುವುದು.

(ಕ್ರಮ:ನಿರ್ದೇಶಕರು, ಪಂಚಾಯತ್ ರಾಜ್–I)

18) ಗ್ರಾಮ ಪಂಚಾಯಿತಿಗಳ ವಿದ್ಯುತ್ ಬಿಲ್ ಪಾವತಿಗೆ ESCROW ಖಾತೆಗಳ ಮೂಲಕ ಜಮಾವಣೆ ಮಾಡುವ ಪದ್ಧತಿಯ ಪ್ರಾರಂಭಕ್ಕೆ ಮುನ್ನವೆ ಬಾಕಿ ಇರುವ ವಿದ್ಯುತ್ ಬಿಲ್ಲುಗಳ ಲೆಕ್ಕಚಾರ ಮಾಡಲಾಗಿದ್ದರು ಪುನ: ವಿದ್ಯುತ್ ಬಿಲ್ ಬಾಕಿ ಇದ್ದು ಅವುಗಳ ಪಾವತಿ ಬಗ್ಗೆ ಇಂಧನ ಇಲಾಖೆಯಿಂದ ಪ್ರಸ್ತಾವನೆ ಬಂದಿರುವುದು ಕಂಡು ಬಂದಿದ್ದು ಈ ಕುರಿತು ಇಂಧನ ಇಲಾಖೆಯನ್ನು ಸಂಪರ್ಕಿಸಿ ಇತ್ಯರ್ಥಗೊಳಿಸುವುದು.

(ಕ್ರಮ:ನಿರ್ದೇಶಕರು, ಪಂಚಾಯತ್ ರಾಜ್–I)

19) ಪ್ರಸ್ತುತ ಸಾಲಿನಲ್ಲಿ ಗ್ರಾಮ ಪಂಚಾಯಿತಿ ಅನುದಾನ–Lumpsum (2515-00-198-1-12) ಯೋಜನೆಯಡಿ ಒದಗಿಸಲಾದ ರೂ.318.43 ಕೋಟಿ ಅನುದಾನವನ್ನು ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳ ವಿದ್ಯುಧೀಕರಣ ಪಾವತಿಗೆ ಬಳಸುವ ಉದ್ದೇಶ ಇರುವುದನ್ನು ಖಚಿತ ಪಡಿಸಿಕೊಂಡು ಪಾವತಿಸಲು ಕ್ರಮ ವಹಿಸುವುದು.

(ಕ್ರಮ:ನಿರ್ದೇಶಕರು, ಪಂಚಾಯತ್ ರಾಜ್–I)

20) ಬಾಹ್ಯ ನೆರವಿನ ಗ್ರಾಮ ಸ್ವರಾಜ್ 2ನೇ ಹಂತದ ಯೋಜನೆ ಸ್ಥಿತಿ ಗತಿ ಕುರಿತು ಮುಖ್ಯಸ್ಥರು, ಗ್ರಾಮ ಸ್ವರಾಜ್ ರವರು ಮಾನ್ಯ ಸಚಿವರಿಗೆ ಪ್ರತ್ಯೇಕವಾಗಿ ವಿವರಿಸುವುದು.

(ಕ್ರಮ:ಮುಖ್ಯಸ್ಥರು, ಗ್ರಾಮ ಸ್ವರಾಜ್)

21) ರಾಜ್ಯದಲ್ಲಿ ಗ್ರಾಮೀಣ ರಸ್ತೆ ನಿರ್ವಹಣ ನೀತಿಯನ್ನು ಜಾರಿಗೊಳಿಸಲಾಗಿದ್ದು, ರಸ್ತೆಗಳ ಪುನರ್ ನಿರ್ಮಾಣಕ್ಕೆ ಬಾಹ್ಯ ನೆರವಿನ ಯೋಜನೆಯಡಿ ಅನುದಾನ ಪಡೆಯುವ ಸಾಧ್ಯತೆಗಳಿದ್ದಲ್ಲಿ ಪ್ರಸ್ತಾವನೆ ಸಲ್ಲಿಸುವುದು.

(ಕ್ರಮ:ನಿರ್ದೇಶಕರು, ಗ್ರಾಮ ವಿಕಾಸ)

22) ರಾಜ್ಯ ಸಂಪನ್ಮೂಲ ಕೇಂದ್ರ (ಪಂಚಾಯತ್ ಭವನ), ಜಕ್ಕೂರಿನಲ್ಲಿ ನಿರ್ಮಿಸುವ ಪ್ರಸ್ತಾವನೆ ಇರುತ್ತದೆ. ಆದರೆ ವಿಧಾನ ಸೌಧದಿಂದ ಜಕ್ಕೂರು ಸಾಕಷ್ಟು ದೂರದಲ್ಲಿರುವುದರಿಂದ ಪಂಚಾಯತ್ ಭವನವನ್ನು ಬೆಂಗಳೂರಿನ ಆನಂದ ರಾವ್ ವೃತ್ತದ ಬಳಿ ಇರುವ ಸರ್ಕಾರಿ ನಿವೇಶನದಲ್ಲಿ ನಿರ್ಮಿಸಲು ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಹಾಗೂ ನಿರ್ದೇಶಕರು, ಪಂಚಾಯತ್ ರಾಜ್–I ಮತ್ತು II ರವರು ಪರಿಶೀಲಿಸಿ ಮಂಡಿಸುವುದು.

(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಹಾಗೂ ನಿರ್ದೇಶಕರು, ಪಂಚಾಯತ್ ರಾಜ್–I ಮತ್ತು II)

23) ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸ್ವಂತ ವಾಹನ ಖರೀದಿ ಬದಲಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳ ಬಳಕೆಗೆ ಕ್ರಮ.

(ಕ್ರಮ:ಉಪಕಾರ್ಯದರ್ಶಿ,ಆಡಳಿತ)

ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ಅಗತ್ಯ ಕ್ರಮ ಕೈಗೊಂಡು, ಅನುಪಾಲನಾ ವರದಿಯನ್ನು ನಡವಳಿ ತಲುಪಿದ ಒಂದು ವಾರದೊಳಗೆ ಪಿ.ಎಂ.ಐ ಶಾಖೆಗೆ ನೀಡಲು ಸೂಚಿಸಿ, ವಂದನೆಗಳೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

KRISHNA BYREGO
Minister for Rural Development & Pa
and
Law and Parliamentary Af

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು

ದಿನಾಂಕ: 05.10.2018

ಸಂಖ್ಯೆ : ಗ್ರಾಅಪ/ 81 /ಯೋಉಮಾ/2018

ಇವರಿಗೆ,

1. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
2. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
3. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್
4. ಉಪಕಾರ್ಯದರ್ಶಿ, ಆಡಳಿತ.
5. ನಿರ್ದೇಶಕರು, ಪಂಚಾಯತ್ ರಾಜ್– I.
6. ನಿರ್ದೇಶಕರು, ಪಂಚಾಯತ್ ರಾಜ್– II.
7. ನಿರ್ದೇಶಕರು, ಸ್ವ.ಉ.ಕಾ.
8. ನಿರ್ದೇಶಕರು, ಗ್ರಾ.ಮೂ.ಸೌ– II
9. ನಿರ್ದೇಶಕರು, ಗ್ರಾಮ ವಿಕಾಸ.
10. ನಿರ್ದೇಶಕರು, ಇ–ಆಡಳಿತ.
11. ನಿರ್ದೇಶಕರು, ರಸ್ತೆ ಮತ್ತು ಸೇತುವೆ.
12. ಆಂತರಿಕ ಆರ್ಥಿಕ ಸಲಹೆಗಾರರು.
13. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ.
14. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
15. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.

16. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
17. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
18. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
19. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
20. ಅಪರ ನಿರ್ದೇಶಕರು, ಎಸ್.ಬಿ.ಎಂ.

ಪ್ರತಿ ಮಾಹಿತಿಗಾಗಿ ಸಲ್ಲಿಸಿದೆ :

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್. ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.